

ಹೌದು. ಕಾರ್ಯಾಗಾರ ಮುಕ್ತಾಯವಾಗುವ ಮೊದಲು ನಾವು ಕಲಿತ ವಿಚಾರಗಳನ್ನು ವೇದಿಕೆಯಲ್ಲಿ ಪ್ರಸ್ತುತಪಡಿಸಬೇಕಿತ್ತು. ಅದರಲ್ಲಿ 'ಭಾಮಾ ಕಲಾಪ'ವೂ ಸೇರಿತ್ತು. ಗುರುಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಹತ್ತು ಮಂದಿ ಕಲಾವಿದೆಯರಲ್ಲಿ ದಿನಾ ಒಬ್ಬೊಬ್ಬರನ್ನೇ ಕಚೇರಿಗೆ ಕರೆಸಿ ಮಾತನಾಡಿಸುತ್ತಿದ್ದರು. ಅಲ್ಲಿ ಗುರು ನಟರಾಜ ರಾಮಕೃಷ್ಣ, ಬುಲಿ ವೆಂಕಟರತ್ನಮ್ಮ, ಸಾರಿಡೇ ಮಾಣಿಕ್ಯಂ ಅವರು ನೂರಾರು ವರ್ಷಗಳ ಹಿಂದೆ ದೇವದಾಸಿಯರು ಧರಿಸಿದ್ದ ಒಡವೆ ಮತ್ತು ವಸ್ತ್ರಗಳನ್ನು ಕೊಟ್ಟು ಧರಿಸಿಕೊಳ್ಳುಂತೆ ಸೂಚಿಸುತ್ತಿದ್ದರು. ಅದರಲ್ಲಿ ನಮ್ಮ ನಿಲುವು ಹೇಗೆ ಕಾಣಿಸುತ್ತಿದೆ ಎಂದು ಗಮನಿಸುತ್ತಿದ್ದರು. ಅಂತೂ ಕಾರ್ಯಾಗಾರದ ಕೊನೆಯ ದಿನದಂದು ನಾವೆಲ್ಲರೂ ಸಾಲಾಗಿ ಮೇಕಪ್‌ಗೆ ಕುಳಿತಿದ್ದೆವು. ನನ್ನನ್ನು ಸಾಲಿನಿಂದ ಹೊರಕರೆದು, ಕೊನೆಯಲ್ಲಿ ಮೇಕಪ್ ಮಾಡಿಸಿಕೊಳ್ಳಲು ಹೇಳಿದರು. ಬಹಳ ಬೇಸರವಾಯಿತು ನನಗೆ. ಆದರೆ ಕೊನೆಗೆ ನನಗೆ ಮೇಕಪ್‌ನಲ್ಲಿ ಕೆಲವು ಬದಲಾವಣೆಗಳನ್ನು ಹೇಳಿ, ಆ ದೇವದಾಸಿಯರ ಒಡವೆಗಳನ್ನು ಧರಿಸಿಕೊಳ್ಳಲು ಕೊಟ್ಟರು. ಎಷ್ಟೋ ವರ್ಷಗಳ ಹಿಂದೆ, ಯಾರೋ ಜ್ಞಾನಿಯಾಗಿದ್ದ ದೇವದಾಸಿ ಇದೇ ಒಡವೆಗಳನ್ನು ಧರಿಸಿ ದೇವರ ಸೇವೆ ಮಾಡಿದ್ದಳಲ್ಲ... ಅದೇ ಒಡವೆಗಳನ್ನು ಧರಿಸಿ ನಾನಿಂದು 'ಭಾಮಾ ಕಲಾಪ'ವನ್ನು ಮಾಡುತ್ತಿದ್ದೇನಲ್ಲ ಎಂದು ನನಗೆ ಕಣ್ಣಲ್ಲಿ ನೀರು ತುಂಬಿ ಬಂದಿತು. ಹೀಗೆ ಸಂತೃಪ್ತಿಯ ಕಣ್ಣೀರು ಬಂದ ಅನೇಕ ಕ್ಷಣಗಳನ್ನು ದೇವರು ನನಗೆ ಬದುಕಿನಲ್ಲಿ ಕೊಟ್ಟಿದ್ದಾರೆ. ಎಷ್ಟೋ ಜನ್ಮಗಳ ಪುಣ್ಯವೇನೋ ಎಂದು ಭಾವಿಸಿಕೊಳ್ಳುವಂತೆ ಮಾಡಿದ್ದಾರೆ.

ಕಾರ್ಯಾಗಾರ ಮುಕ್ತಾಯವಾದ ಬಳಿಕ ಪ್ರಮಾಣ ಪತ್ರ ಕೊಡುವ ಮುನ್ನ ನಮ್ಮಿಂದ ಒಂದು ಪ್ರಮಾಣ ಪತ್ರವನ್ನು ಅಲ್ಲಿ ಬರೆಸಿಕೊಂಡರು. 'ಇಲ್ಲಿ ಕಲಿತ ನೃತ್ಯದಲ್ಲಿ ಯಾವುದೆ ಬದಲಾವಣೆ ಮಾಡುವುದಿಲ್ಲ. ಈ ನೃತ್ಯದ ಪರಂಪರೆಗೆ ಭಂಗ ಬಾರದಂತೆ ಇದನ್ನು ಪ್ರಸ್ತುತಪಡಿಸುತ್ತೇನೆ' ಎಂದು ಬರೆದುಕೊಟ್ಟೆವು. ಅಷ್ಟೊಂದು ಜ್ಞಾನಿಗಳಾದ ದೇವದಾಸಿಯರು ಪ್ರಸ್ತುತಪಡಿಸುತ್ತ ಬಂದ ಆ ನೃತ್ಯದಲ್ಲಿ ಬದಲಾವಣೆ ಮಾಡುವ ಧೈರ್ಯ ಯಾರಿಗಿದೆ ಹೇಳಿ. ಆ ಪರಂಪರೆ